# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002**

***ಪತ್ರಿಕಾ ಪ್ರಕಟಣೆ*** **ದಿನಾಂಕ: 15.03.2011**

## ***ಪಾಲಿಕೆ ಆಡಳಿತ ವ್ಯಾಪ್ತಿಯಲ್ಲಿ ಘನತ್ಯಾಜ್ಯ ವಸ್ತು ನಿರ್ವಹಣಾ ಉಪಕರ ಸಂಗ್ರಹಣೆ***

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಆಡಳಿತ ವ್ಯಾಪ್ತಿಯಲ್ಲಿ ನೈರ್ಮಲೀಕರಣ ವ್ಯವಸ್ಥೆ ಮತ್ತು ಘನತ್ಯಾಜ್ಯ ವಸ್ತು ನಿರ್ವಹಣಾ ವ್ಯವಸ್ಥೆಗೆ ವಾರ್ಷಿಕ ಸುಮಾರು 200 ಕೋಟಿ ವೆಚ್ಚವಾಗುತ್ತಿದ್ದು, ಈ ಮೊತ್ತವು ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿದೆ. ಆದುದರಿಂದ ಕರ್ನಾಟಕ ಪೌರ ನಿಗಮಗಳ ಕಾಯಿದೆ 1976ರ ಪ್ರಕರಣ 103 B ಅನ್ವಯ ಹಾಗೂ ತೆರಿಗೆ ನಿಯಮಾವಳಿ 19 A ರಲ್ಲಿ ಸೂಚಿಸಿರುವಂತೆ ಘನತ್ಯಾಜ್ಯ ವಸ್ತು ನಿರ್ವಹಣಾ ಉಪಕರವನ್ನು ನಗರದ ಆಸ್ತಿ ಮಾಲೀಕರಿಂದ ಈ ಕೆಳಕಂಡ ದರಗಳಲ್ಲಿ ಸಂಗ್ರಹಿಸಲು ನಿಗಧಿಪಡಿಸಲಾಗಿದೆ.

**I. ವಾಸದ ಕಟ್ಟಡಗಳಿಗೆ**

| ವಿವರ | ಮಾಹೆಯಾನ |
|---|---|
| • 1000 ಚದರಡಿ ವರೆಗೆ ಇರುವ ಆವರಣಕ್ಕೆ ಪ್ರತಿ ತಿಂಗಳಿಗೆ | ರೂ. 10 |
| • 1001 ಚದರಡಿ ಇಂದ 3000 ಚದರಡಿ ವರೆಗೆ ಇರುವ ಆವರಣಕ್ಕೆ ಪ್ರತಿ ತಿಂಗಳಿಗೆ | ರೂ. 30 |
| • 3001 ಚದರಡಿ ಗಿಂತ ಮೇಲ್ಪಟ್ಟ ಆವರಣಕ್ಕೆ ಪ್ರತಿ ತಿಂಗಳಿಗೆ | ರೂ. 50 |

**II. ವಾಣಿಜ್ಯ ಕಟ್ಟಡಗಳಿಗೆ**

| ವಿವರ | ಮಾಹೆಯಾನ |
|---|---|
| • 1000 ಚದರಡಿ ವರೆಗೆ ಇರುವ ಆವರಣಕ್ಕೆ ಪ್ರತಿ ತಿಂಗಳಿಗೆ | ರೂ. 50 |
| • 1001 ಚದರಡಿ ಇಂದ 5000 ಚದರಡಿ ವರೆಗೆ ಇರುವ ಆವರಣಕ್ಕೆ ಪ್ರತಿ ತಿಂಗಳಿಗೆ | ರೂ. 100 |
| • 5001 ಚದರಡಿ ಗಿಂತ ಮೇಲ್ಪಟ್ಟ ಆವರಣಕ್ಕೆ ಪ್ರತಿ ತಿಂಗಳಿಗೆ | ರೂ. 200 |

**III. ಕೈಗಾರಿಕಾ ಕಟ್ಟಡಗಳಿಗೆ**

| ವಿವರ | ಮಾಹೆಯಾನ |
|---|---|
| • 1000 ಚದರಡಿ ವರೆಗೆ ಇರುವ ಆವರಣಕ್ಕೆ ಪ್ರತಿ ತಿಂಗಳಿಗೆ | ರೂ. 100 |
| • 1001 ಚದರಡಿ ಇಂದ 5000 ಚದರಡಿ ವರೆಗೆ ಇರುವ ಆವರಣಕ್ಕೆ ಪ್ರತಿ ತಿಂಗಳಿಗೆ | ರೂ. 200 |
| • 5001 ಚದರಡಿ ಗಿಂತ ಮೇಲ್ಪಟ್ಟ ಆವರಣಕ್ಕೆ ಪ್ರತಿ ತಿಂಗಳಿಗೆ | ರೂ. 300 |

. . . 2

## IV. ಹೋಟೆಲ್‌ಗಳು, ಕಲ್ಯಾಣ ಮಂಟಪಗಳು, ನರ್ಸಿಂಗ್ ಹೋಂ

| ವಿವರ | ಮಾಹೆಯಾನ |
|---|---|
| • 1000 ಚದರಡಿ ವರೆಗೆ ಇರುವ ಆವರಣಕ್ಕೆ ಪ್ರತಿ ತಿಂಗಳಿಗೆ | ರೂ. 300 |
| • 1001 ಚದರಡಿ ಇಂದ 5000 ಚದರಡಿ ವರೆಗೆ ಇರುವ ಆವರಣಕ್ಕೆ ಪ್ರತಿ ತಿಂಗಳಿಗೆ | ರೂ. 500 |
| • 5001 ಚದರಡಿ ಗಿಂತ ಮೇಲ್ಪಟ್ಟ ಆವರಣಕ್ಕೆ ಪ್ರತಿ ತಿಂಗಳಿಗೆ | ರೂ. 600 |

ಮೇಲ್ಕಂಡ ಉಪಕರವನ್ನು ಆಸ್ತಿ ತೆರಿಗೆ ಪಾವತಿ ಮಾಡುವ ಸಂದರ್ಭದಲ್ಲಿ ಖಡ್ಡಾಯವಾಗಿ ಪಾವತಿ ಮಾಡಬೇಕಾಗುತ್ತದೆ. ಈ ರೀತಿ ಪಾವತಿ ಮಾಡಲು ಸ್ವಯಂ ಘೋಷಣಾ ಆಸ್ತಿ ತೆರಿಗೆ ನಮೂನೆಯ ಜೊತೆಯಲ್ಲಿ ಘನತ್ಯಾಜ್ಯ ವಸ್ತು ನಿರ್ವಹಣಾ ಉಪಕರಗಳ ಸ್ವಯಂ ಘೋಷಣಾ ನಮೂನೆಯನ್ನು ಒದಗಿಸಲಾಗುತ್ತದೆ. ಈ ನಮೂನೆಯಲ್ಲಿ ಆಯಾ ಕಟ್ಟಡದ ಅಳತೆ ಮತ್ತು ಉಪಯೋಗವನ್ನು ನಮೂದಿಸಿ, ಅದಕ್ಕನುಗುಣವಾಗಿ ಉಪಕರವನ್ನು ಪಾವತಿ ಮಾಡತಕ್ಕದ್ದು.

ಈ ದರಗಳು ದಿನಾಂಕ: 01.04.2011 ರಿಂದ ಜಾರಿಗೆ ಬರುತ್ತವೆ. ದಿನಾಂಕ: 01.04.2011 ರಿಂದ ಆಯಾ ಸ್ವತ್ತಿನ ಮಾಲೀಕರು ಅಥವಾ ಅನುಭೋಗದಾರರು ತಮ್ಮ ಸ್ವತ್ತಿನ ಪೂರ್ಣ ವರ್ಷದ ಅಥವಾ ಅರ್ಧ ವರ್ಷದ ಆಸ್ತಿ ತೆರಿಗೆ ಪಾವತಿ ಮಾಡುವ ಸಂದರ್ಭದಲ್ಲಿ ಘನತ್ಯಾಜ್ಯ ವಸ್ತು ನಿರ್ವಹಣಾ ಉಪಕರವನ್ನೂ ಸಹ ಖಡ್ಡಾಯವಾಗಿ ವರ್ಷದ ಪ್ರಾರಂಭದಿಂದ 60 ದಿವಸಗಳ ಒಳಗೆ ಆಯಾ ವರ್ಷದ ಪೂರ್ಣ/ಅರ್ಧ ವರ್ಷದ ಉಪಕರವನ್ನು ಮುಂಗಡವಾಗಿ ಪಾವತಿ ಮಾಡಲು ಈ ಮೂಲಕ ತಿಳಿಸಲಾಗಿದೆ. ಪೂರ್ಣ ವರ್ಷದ ಆಸ್ತಿ ತೆರಿಗೆ ಪಾವತಿ ಮಾಡುವವರು ಘನತ್ಯಾಜ್ಯ ವಸ್ತು ನಿರ್ವಹಣಾ ಉಪಕರವನ್ನು ಪೂರ್ಣ ವರ್ಷದ ಅವಧಿಗೆ ಮುಂಗಡವಾಗಿ ಪಾವತಿ ಮಾಡತಕ್ಕದ್ದು. ತಪ್ಪಿದಲ್ಲಿ ಮಹಾನಗರ ಪಾಲಿಕೆ ಕಂದಾಯ ಇಲಾಖೆಯ ಸಿಬ್ಬಂದಿಯು, ಆಯಾ ಕಟ್ಟಡದ ಅಳತೆ ಮತ್ತು ಉಪಯೋಗಕ್ಕನುಗುಣವಾಗಿ ಘನತ್ಯಾಜ್ಯ ವಸ್ತು ನಿರ್ವಹಣಾ ಉಪಕರವನ್ನು ವಿಧಿಸಿ, ತಿಳುವಳಿಕೆ ಪತ್ರ ನೀಡಿ, ದಂಡ/ಬಡ್ಡಿ ಸಮೇತ ವಸೂಲು ಮಾಡುತ್ತಾರೆ.

ನಗರದ ನೈರ್ಮಲೀಕರಣ ವ್ಯವಸ್ಥೆಯ ಉತ್ತಮತೆಗಾಗಿ ಈ ಉಪಕರಗಳು ಅತ್ಯಂತ ಅಗತ್ಯವಾಗಿವೆ ಎಂಬುದನ್ನು ಸಾರ್ವಜನಿಕರ ಗಮನಕ್ಕೆ ತರಲಾಗಿದೆ ಎಂದು ಪಾಲಿಕೆಯ ಆಯುಕ್ತರು ತಿಳಿಸಿದ್ದಾರೆ.

**ಸಾರ್ವಜನಿಕ ಸಂಪರ್ಕಾಧಿಕಾರಿ**